ದಿನಾಂಕ **22-01-2020** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲು ಶ್ರೀ ಹೆಚ ಎಂ ಕೆ ವಕೀಲರಿಂದ

ನಾನು ಮೂಲತಃ ಹಾವಿನಾಳ ಗ್ರಾಮದವನಿರುತ್ತೇನೆ. ನನಗೆ ವಾದಿ ಮತ್ತು ಪ್ರತಿವಾದಿಗಳ ಪರಿಚಯವಿರುತ್ತದೆ. ಪ್ರತಿವಾದಿ 1 ರ ಗಂಡ ಮತ್ತು ಪ್ರತಿವಾದಿ 2 ರಿಂದ 6 ರವರ ತಂದೆ ಮೂಲತಃ ಹಾವಿನಾಳ ಗ್ರಾಮದವರು ಎಂದರೆ ಸರಿ. ಪ್ರತಿವಾದಿಗಳು ಈಗ ಹಾವಿನಾಳ ಗ್ರಾಮದಲ್ಲಿ ವಾಸವಿರುತ್ತಾರೆ. ತಾಳುರಿನಲ್ಲಿ ಈಗ ಯಾರೂ ಇರುವುದಿಲ್ಲ. ಕರಿಯಪ್ಪ ಮತ್ತು ಹನುಮಂತಪ್ಪ ಪವಾಡೆಪ್ಪ ಪಾಲುವಿಭಾಗವಾಗಿರುತ್ತಾರೆಂದರೆ ಸರಿ. ಸದರಿ ಪಾಲುವಿಭಾಗದಲ್ಲಿ ಯಾರಿಗೆ ಯಾವ ಹಿಸ್ಸೆ ಬಂದಿದ ಎಂದು ನನಗೆ ಗೊತ್ತಿರುವುದಿಲ್ಲ. ಅವರು ಹಾವಿನಾಳ ಗಾಮದ ಅವರ ತಂದೆಯ ಜಮೀನುಗಳನ್ನು ಭಾಗಮಾಡಿಕೊಂಡಿರುತ್ತಾರೆ. ಸದರಿ ವಿಭಾಗದಂತೆ ಅವರ ಹಿಸ್ಸೆಗೆ ಬಂದ ಭಾಗಗಳನ್ನು ಅವರೇ ಸಾಗುವಳಿ ಮಾಡುತ್ತಿದ್ದಾರೆಂದರೆ ಸರಿ.

ವಾದಿ 1 ಮತ್ತು 2 ರವರ ತಾಯಿ ಲಿಂಗಮ್ಮನವರನ್ನು ನಾನು ನೋಡಿರುತ್ತೇನೆ. ಅವರು ಹಾವಿನಾಳ ಗ್ರಾಮದಲ್ಲಿ ವಾಸವಿರುತ್ತಾರೆ. ಅವರು ಮೂಲತಃ ತಾಳೂರು ಗ್ರಾಮದವರು. 1 ನೇ ಪ್ರತಿವಾದಿ ತಾಳೂರು ಗ್ರಾಮದವರು ಇರುತ್ತಾರೆ. ಅವರು ಲಿಂಗಮ್ಮ ರವರ ಅಣ್ಣನ ಮಗಳು ಇರುತ್ತಾರೆ. ವಾದಿ ಮತ್ತು ಪ್ರತಿವಾದಿಗಳ ಮನೆಯ ವಿಚಾರಗಳು ನನಗೆ ಗೊತ್ತಿರುತ್ತದೆ. ತಾಳೂರಿನಲ್ಲಿ ಇರುವ ಜಮೀನುಗಳನ್ನು ಪವಾಡೆಪ್ಪ ರವರು ಮಾಡುತ್ತಿದ್ದರು. ಪವಾಡೆಪ್ಪ ರವರು ತಾಳೂರಿನಲ್ಲಿ ವಾಸವಿರುತ್ತಾರೆ. ಮಲ್ಲಿಲಿಂಗಮ್ಮ ರವರು 1 ನೇ ಪ್ರತಿವಾದಿಗೆ 1996 ರಲ್ಲಿ ಪತ್ರ ಬರೆದುಕೊಟ್ಟ ವಿಚಾರ ನನಗೆ ಗೊತ್ತಿರುವುದಿಲ್ಲ. ಸದರಿ ಪತ್ರದ ಪ್ರಕಾರ 1 ನೇ ಪ್ರತಿವಾದಿಯೇ ದಾವಾ ಸ್ವತ್ತುಗಳ ಖಾತೆ ಹೊಂದಿ ಅವರೇ ಸ್ವಾಧೀನದಲ್ಲಿ ಇದ್ದಾರೆಂದರೆ ನನಗೆ ಗೊತ್ತಿರುವುದಿಲ್ಲ. ಮನೆಯನ್ನೂ ಕೂಡಾ ಅವರ ಹೆಸರಿಗೆ ಬರೆದುಕೊಟ್ಟಿದ್ದಾರೆಂದರೆ ನನಗೆ ಗೊತ್ತಿರುವುದಿಲ್ಲ. ಅವರ ಹೆಸರಿಗೆ ಹಕ್ಕು ಬದಲಾವಣೆಯಾದ ಬಗ್ಗೆ ನನಗೆ ಗೊತ್ತಿರುವುದಿಲ್ಲ.

1 ನೇ ದಾವಾ ಸ್ವತ್ತನ್ನು ಈಗ ಯಾರು ಮಾಡುತ್ತಿದ್ದಾರೆಂದು ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ ಪ್ರತಿವಾದಿಗಳು ವಾದಿಯರು ಜಮೀನಿಗೆ ಹೋದಾಗ ತೊಂದರೆ ಮಾಡಿದ ವಿಚಾರ 15 ವರ್ಷದ ಹಿಂದೆ ಗೊತ್ತಾಗಿರುತ್ತದೆ. 15 ವರ್ಷದಿಂದ ಅವರು ತಾಳೂರಿಗೆ ಬಂದು ಸಾಗುವಳಿ ಮಾಡಿರುವುದಿಲ್ಲ. ಪಾಲು ವಿಭಾಗ ಮಾಡಿಕೊಂಡಂತೆ ಅವರ ಭಾಗದಲ್ಲಿ ಅವರೇ ಸ್ವಾಧೀನ ಮಾಡುತ್ತಿದ್ದರೂ ವಾದಿಯರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯರು ನನಗೆ ಸಂಬಂಧಿಕರಾದ್ದರಿಂದ ಅವರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.

ಪ್ರ.ದ.ನ್ಯಾದಂ., ಸಂಡೂರು.